**ಕರ್ನಾಟಕ ಸರ್ಕಾರ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.68/2019**

ಪಿ.ಡಬ್ಲ್ಯೂ: 5

ಸಿ.ಡಬ್ಲ್ಯೂ: 4

ಸಾಕ್ಷಿದಾರರ ಹೆಸರು : ಶಿವಕುಮಾರ್
ತಂದೆಯ ಹೆಸರು: : ಕಾಸಿವೇಲು
ವಯಸ್ಸು : **42 ವರ್ಷ**
ಉದ್ಯೋಗ : ಕೂಲಿ ಕೆಲಸ
ವಾಸಸ್ಥಳ : ಕೆಂಚಾಪುರ ಗ್ರಾಮ

**ದಿನಾಂಕ: 23-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

1, 2, 5, 6 ನೇ ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರು ಆರೋಪಿತರ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ದಿ: 24-10-2017 ರಂದು ಅಡಿಕೆ ಕಳ್ಳತನವಾದ ವಿಚಾರದ ಬಗ್ಗೆ ಪೊಲೀಸರು ಮಹಜರ್ ಮಾಡಿದ್ದು, ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿದೆ. ನನ್ನ ಸಮಕ್ಷಮದಲ್ಲಿ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-3 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿ: 24-10-2017 ರಂದು ಕೆಂಚಾಪುರ ಗೇಟ್ ನಲಿಲರುವ ಸಿದ್ದಪ್ಪನವರ ಅಡಿಕೆ ಮನೆಯ ಎದುರು ಕಣದಲ್ಲಿ ಅಡಿಕೆ ಒಣಹಾಕಿದ್ದು, ಅಡಿಕೆ ಕಳ್ಳತನವಾಗಿರುವ ವಿಚಾರವಾಗಿ ಪೊಲೀಸರು ಮಹಜರ್ ಮಾಡಿದ್ದು, ಆ ಸಮಯದಲ್ಲಿ ಹಳದಿ ಬಣ್ಣದ ಮರು ಟಾರ್ಪಲ್ ಗಳನ್ನು ನಿಮ್ಮ ಸಮಕ್ಷಮ

ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿ. ಸದರಿ ಟಾರ್ಪಲ್ ಚಾಸಾ-1 ರವರಿಗೆ ಸೇರಿದ್ದಾಗಿದೆ ಎಂದರೆ ಸರಿ.

**<u>ಪಾಟೀ ಸವಾಲು : ಆರೋಪಿ ಪರ</u>** <u>ಶ್ರೀ ಎಎ</u> **<u>ವಕೀಲರಿಂದ.</u>**

ಕಳ್ಳತನವಾದ ದಿನಾಂಕ ನನಗೆ ನೆನಪಿಲ್ಲ. ಪೊಲೀಸರು ನನಗೆ ಮಹಜರ್ ಗೆ ಸಹಕರಿಸಲು ನೋಟಿಸ್ ನೀಡಿರುವುದಿಲ್ಲ. ಚಾಸಾ-1 ನನಗೆ ಪರಿಚಯ ಇರುತ್ತಾರೆ. ಮಹಜರ್ ಗೆ ನನ್ನನ್ನು ಹೊರತುಪಡಿಸಿ ಚಾಸಾ-5 ರವರು ಸಹಿ ಮಾಡಿರುತ್ತಾರೆ, ಇನ್ನಿತರರು ಯಾರು ಮಾಡಿರುತ್ತಾರೆಂದು ನನಗೆ ತಿಳಿದಿರುವುದಿಲ್ಲ. ನಿಮ್ಮ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**